## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ: 142ರಲ್ಲಿನ ಯೋಜನೆಗೆ ಸಂಬಂಧಿಸಿದಂತೆ, "ವ್ಯಾಪಾರ / ಉದ್ಯಮಗಳಲ್ಲಿ ಮಹಿಳೆಯರ ಉಪಸ್ಥಿತಿಯನ್ನು ಹೆಚ್ಚಿಸಲು KITS ರವರು "ಎಲಿವೇಟ್" ಯೋಜನೆಯಡಿ ಗುರುತಿಸಲ್ಪಟ್ಟ ಮಹಿಳಾ ಉದ್ದಿಮೆದಾರರಿಗೆ / ಮಹಿಳಾ ನೇತೃತ್ವದ ಸ್ಟಾರ್ಟ್ ಆಪ್‌ಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ 10 ಲಕ್ಷ ರೂ.ಗಳ ತನಕ ನೇರ ಸಾಲವನ್ನು ಒದಗಿಸಿ ಪ್ರೋತ್ಸಾಹಿಸಲಾಗುವುದು." ಯೋಜನೆಯ ಅನುಷ್ಠಾನ ಹಾಗೂ ಮಾರ್ಗಸೂಚಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1) 2022-23ನೇ ಸಾಲಿನ ಆಯವ್ಯ ಭಾಷಣದ ಕಂಡಿಕೆ :142
2) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-2&10) ಇವರ ಅ.ಟಿ.ಸಂಖ್ಯೆ:ಆಇ 15 ವೆಚ್ಚ-10/2022, ದಿನಾಂಕ:05.04.2022
3) ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಮ.ಅ,ನಿಗಮ ಇವರ ಏಕ ಕಡತ ಸಂಖ್ಯೆ:KSWDC/Sch/Misc/1/2022-Scheme Section ಮತ್ತು KSWDC/Sch/Misc/2/2022-Scheme Section

********

**ಪ್ರಸ್ತಾವನೆ:**

ಮೇಲೆ ಓದಲಾದ ಉಲ್ಲೇಖಿತ (1)ರ ದಿನಾಂಕ:04.03.2022ರಂದು ಘೋಷಿಸಲಾದ 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ :142 ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ.

"ವ್ಯಾಪಾರ / ಉದ್ಯಮಗಳಲ್ಲಿ ಮಹಿಳೆಯರ ಉಪಸ್ಥಿತಿಯನ್ನು ಹೆಚ್ಚಿಸಲು KITS ರವರು "ಎಲಿವೇಟ್" ಯೋಜನೆಯಡಿ ಗುರುತಿಸಲ್ಪಟ್ಟ ಮಹಿಳಾ ಉದ್ದಿಮೆದಾರರಿಗೆ/ ಮಹಿಳಾ ನೇತೃತ್ವದ ಸ್ಟಾರ್ಟ್ ಆಪ್‌ಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ 10 ಲಕ್ಷ ರೂ.ಗಳ ತನಕ ನೇರ ಸಾಲವನ್ನು ಒದಗಿಸಿ ಪ್ರೋತ್ಸಾಹಿಸಲಾಗುವುದು."

ಮೇಲೆ ಓದಲಾದ ಉಲ್ಲೇಖಿತ (2)ರ ದಿನಾಂಕ:05.04.2022ರ ಆರ್ಥಿಕ ಇಲಾಖೆಯ ಅ.ಟಿ.ಯಲ್ಲಿ ಸದರಿ ಯೋಜನೆಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ರೂ.2.50 ಕೋಟಿಗಳನ್ನು ಒದಗಿಸುವಂತೆ ಕೋರಿದೆ. ಆದರೆ ಈ ಯೋಜನೆಯನ್ನು ಮಹಿಳಾ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಅನುದಾನದಿಂದ ಅನುಷ್ಠಾನಗೊಳಿಸುವಂತೆ ಸೂಚಿಸಲಾಗಿದ್ದು, ಈ ಉದ್ದೇಶಕ್ಕಾಗಿ ಯಾವುದೇ ಅನುದಾನವನ್ನು ಲೆಕ್ಕ ಶೀರ್ಷಿಕೆಯಡಿಯಲ್ಲಿ ಒದಗಿಸಿರುವುದಿಲ್ಲವೆಂದು ಸೂಚಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖಿತ (3)ರಲ್ಲಿನ ಏಕ ಕಡತದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರು 2022-23ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ ಸಂಖ್ಯೆ: 142 ರಲ್ಲಿ ಘೋಷಿಸಿರುವ ಹೊಸ ಯೋಜನೆಯನ್ನು ಅನುಷ್ಠಾಗೊಳಿಸುವ ಸಂಬಂಧ ಈ ಯೋಜನೆಯನ್ನು ವೃದ್ಧಿ- ಹೆಸರಿನಡಿ ಅನುಷ್ಠಾನಗೊಳಿಸಲು ಹಾಗೂ ಯೋಜನೆಯ ಉದ್ದೇಶ, ಅರ್ಹತೆಯ ಮಾನದಂಡಗಳು, ಹೊಸ ಯೋಜನೆಯ ಅನುಷ್ಠಾನದ ವಿಧಾನಗಳು, ಮಹಿಳಾ ಉದ್ದಿಮೆದಾರರ ಆಯ್ಕೆಗಾಗಿ ಸಮಿತಿ ರಚನೆ, ಸಾಲ ಬಿಡುಗಡೆ ವಿಧಾನ ಇತ್ಯಾದಿ ವಿವರಗಳೊಂದಿಗೆ ನಿಗದಿತ

ನಮೂನೆಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಹಾಗೂ ಈ ಹೊಸ ಯೋಜನೆಗೆ ಒದಗಿಸುವ ಅನುದಾನವನ್ನು ಕ.ರಾ.ಮ.ಅ.ನಿಗಮದ ಮೂಲಕ ಅನುಷ್ಠಾನಗೊಳ್ಳುತ್ತಿರುವ ಕಿರುಸಾಲ ಯೋಜನೆಯ ಲೆ.ಶೀ:6235-60-800-0-06(394)ರಲ್ಲಿ ಒದಗಿಸುವಂತೆ ಮತ್ತು ಸದರಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹಂಚಿಕೆಯಾದ ಅನುದಾನವನ್ನು ಬಳಸಿಕೊಂಡು ವೆಚ್ಚ ಮಾಡಲಾಗುವುದೆಂದು ತಿಳಿಸುತ್ತಾ ಮಾರ್ಗಸೂಚಿಯನ್ನು ಅನುಮೋದಿಸಬೇಕೆಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಮಮಇ 54 ಮಅನಿ 2022, ಬೆಂಗಳೂರು, ದಿನಾಂಕ: 12.04.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ: 142ರಲ್ಲಿ ಘೋಷಿಸಿರುವಂತೆ, "ವ್ಯಾಪಾರ / ಉದ್ಯಮಗಳಲ್ಲಿ ಮಹಿಳೆಯರ ಉಪಸ್ಥಿತಿಯನ್ನು ಹೆಚ್ಚಿಸಲು KITS ರವರು "ಎಲಿವೇಟ್" ಯೋಜನೆಯಡಿ ಗುರುತಿಸಲ್ಪಟ್ಟ ಮಹಿಳಾ ಉದ್ದಿಮೆದಾರರಿಗೆ/ಮಹಿಳಾ ನೇತೃತ್ವದ ಸ್ಟಾರ್ಟ್ ಆಪ್‌ಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ 10 ಲಕ್ಷ ರೂ.ಗಳ ತನಕ ನೇರ ಸಾಲವನ್ನು ಒದಗಿಸುವ ಹೊಸ ಯೋಜನೆಯನ್ನು ವೃದ್ಧಿ ಹೆಸರಿನಡಿ Budget Adviseನಲ್ಲಿ ನೀಡಿರುವ ಸಲಹೆ ಸೂಚನೆಯನುಸಾರ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಅನುದಾನದಿಂದ ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ

ಹಾಗೂ ಅತೀ ಕಡಿಮೆ Gender Development Index ಇರುವ ಜಿಲ್ಲೆ / ತಾಲ್ಲೂಕುಗಳಲ್ಲಿ ಆದ್ಯತೆ ನೀಡಿ ಅನುಷ್ಠಾನಗೊಳಿಸುವ ಹಾಗೂ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿನ ಮಾರ್ಗಸೂಚಿಯನ್ವಯ, ನಿಯಮಾನುಸಾರ ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸುವ ಷರತ್ತಿನೊಂದಿಗೆ ಕ್ರಮವಹಿಸುವಂತೆ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:11.04.2022ರ ಅ.ಟಿ. ಸಂಖ್ಯೆ:ಆಇ/194 ವೆಚ್ಚ-10/2022ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿ ಹಾಗೂ ಯೋಜನಾ ಇಲಾಖೆಯು ದಿನಾಂಕ:12.04.2022ರ ಸಂಖ್ಯೆ:ಪಿಡಿಎಸ್ 35 ಐಎಂಎಂ 2022 ರಲ್ಲಿ ನೀಡಿರುವ ಸಹಮತಿ ಮತ್ತು ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಸರಸ್ವತಿ 12/04/2022

(ಎನ್.ಸರಸ್ವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-3 (ಪ್ರ)
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.

2. ಮಹಾಲೇಖಪಾಲರು, (ಇ & ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
3. ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
4. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಬೆಂಗಳೂರು-11.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನಸೌಧ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ ಬೆಂಗಳೂರು.
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
12. ಶಾಖಾಧಿಕಾರಿ, ಸ್ವೀಮರ ಶಾಖೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಒಡಿಜಿಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.

******

12/10/2022

# ಅನುಬಂಧ

## ಸರ್ಕಾರಿ ಆದೇಶ ಸಂಖ್ಯೆ:ಮಮಇ 54 ಮಅನಿ 2022, ದಿನಾಂಕ:12.04.2022ಕ್ಕೆ ಮಾರ್ಗಸೂಚಿ:

******

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್) ರವರು ಐಡಿಯಾ2ಪಿಒಸಿ (ಎಲಿವೇಟ್) ಯೋಜನೆಯಡಿ ಗುರುತಿಸಲ್ಪಟ್ಟ ಮಹಿಳಾ ಉದ್ದಿಮೆದಾರರನ್ನು ಪ್ರೋತ್ಸಾಹಿಸಲು ನಿಗಮದಿಂದ ನೇರ ಸಾಲ ಸೌಲಭ್ಯ ಕಲ್ಪಿಸುವ ಬಗ್ಗೆ: ವ್ಯಾಪಾರ/ಉದ್ಯಮಗಳಲ್ಲಿ ಮಹಿಳೆಯರ ಉಪಸ್ಥಿತಿಯು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಮಹಿಳೆಯರ ಒಡೆತನದ ವ್ಯಾಪಾರ/ಉದ್ಯಮಗಳು ಸಮಾಜದಲ್ಲಿ ಸ್ಪೂರ್ತಿ ನೀಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ ಮತ್ತು ರಾಜ್ಯದಲ್ಲಿ ಹೆಚ್ಚಿನ ಉದ್ಯೋಗವಕಾಶಗಳನ್ನು ಸೃಷ್ಟಿಸುತ್ತಿದೆ.

ಈ ರೀತಿ ಮಹಿಳಾ ಉದ್ದಿಮೆದಾರರು ತಮ್ಮ ಉದ್ಯಮಗಳನ್ನು ಸ್ಥಾಪಿಸಲು ಸಾಕಷ್ಟು ಬೆಂಬಲದ ಮತ್ತು ಹಣಕಾಸಿನ ಅಗತ್ಯತೆಯು ನಿರ್ಣಾಯಕವಾಗಿರುತ್ತದೆ. ಇಂತಹ ಮಹಿಳಾ ಉದ್ದಿಮೆದಾರರು ತಮ್ಮ ಉದ್ಯಮಗಳನ್ನು/ಸೇವೆಗಳನ್ನು ಅಭಿವೃದ್ಧಿಪಡಿಸಲು, ಸ್ಕೇಲಿಂಗ್ ಇತ್ಯಾದಿಗಳಿಗೆ ಹಣಕಾಸಿನ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ, ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್) ರವರು ಎಲಿವೇಟ್ ಯೋಜನೆಯಡಿ ಗುರುತಿಸಲ್ಪಟ್ಟ ಮಹಿಳಾ ಉದ್ದಿಮೆದಾರರನ್ನು/ಮಹಿಳೆಯರ ನೇತೃತ್ವದ ಸ್ಟಾರ್ಟ್‌ಅಪ್‌ಗಳನ್ನು ಪ್ರಾರಂಭಿಸಲು ಪ್ರೋತ್ಸಾಹಿಸುವ ಸಲುವಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಪ್ರತಿ ವರ್ಷ 25 ಮಹಿಳೆಯರಿಗೆ ಕನಿಷ್ಠ ಶೇ.4 ರ ಬಡ್ಡಿ ದರದಲ್ಲಿ ರೂ.5.00 ಲಕ್ಷದಿಂದ ರೂ.10.00 ಲಕ್ಷಗಳವರೆಗೆ ನೇರ ಸಾಲ ಸೌಲಭ್ಯವನ್ನು ನೀಡಲು ಉದ್ದೇಶಿಸಲಾಗಿದ್ದು, ಅದರಂತೆ, 2022-23ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ ಸಂಖ್ಯೆ:142 ರಲ್ಲಿ "ವ್ಯಾಪಾರ/ಉದ್ಯಮಗಳಲ್ಲಿ ಮಹಿಳೆಯರ ಉಪಸ್ಥಿತಿಯನ್ನು ಹೆಚ್ಚಿಸಲು ಕಿಟ್ಸ್ ರವರು 'ಎಲಿವೇಟ್' ಯೋಜನೆಯಡಿ ಗುರುತಿಸಲ್ಪಟ್ಟ ಮಹಿಳಾ ಉದ್ದಿಮೆದಾರರಿಗೆ/ಮಹಿಳಾ ನೇತೃತ್ವದ ಸ್ಟಾರ್ಟ್‌ಅಪ್‌ಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ರೂ.10.00 ಲಕ್ಷಗಳ ತನಕ ನೇರ ಸಾಲವನ್ನು ಒದಗಿಸಿ ಪ್ರೋತ್ಸಾಹಿಸಲಾಗುವುದು" ಎಂದು ಘೋಷಿಸಲಾಗಿದೆ.

**ಹೊಸ ಯೋಜನೆಯ ಹೆಸರು:- "ವೃದ್ಧಿ"**

**ಹೊಸ ಯೋಜನೆಯ ಉದ್ದೇಶ.:-**

1. ಉತ್ಪನ್ನದ ಪ್ರಮಾಣ ಹೆಚ್ಚಿಸಿಕೊಳ್ಳಲು, ಮಾರ್ಗದರ್ಶನ ಪಡೆದುಕೊಳ್ಳಲು ಹಾಗೂ ಉತ್ಪನ್ನದ ಬ್ರ್ಯಾಂಡ್ ರೂಪಿಸಿಕೊಳ್ಳಲು.

2. ಉದಯೋನ್ಮುಖ ಪರಿಕಲ್ಪನೆಗಳನ್ನು ಬೆಂಬಲಿಸುವ ಸಾಹಸೋದ್ಯಮ ಬಂಡವಾಳಗಳನ್ನು ಮತ್ತು ವೇಗವರ್ಧಕಗಳನ್ನು ಕಂಡುಹಿಡಿಯುವುದು ಹಾಗೂ ಹೊಸ ವ್ಯವಹಾರ ಮಾದರಿಗಳಿಗೆ ಪರಿಹಾರಗಳನ್ನು ಪರಿಶೀಲನೆಗೆ ಒಳಪಡಿಸುವಲ್ಲಿ ಮತ್ತು ಗ್ರಾಹಕರನ್ನು ತಲುಪಲು ಅವಕಾಶ ಪಡೆಯಲು ಸಹ ಸಹಾಯಕವಾಗುವುದು.

3. ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ಪ್ರಚುರಪಡಿಸಲು.

4. ವ್ಯವಹಾರದ ವಿಸ್ತರಣೆಗಾಗಿ ಮತ್ತು ನಿಯಾಮಾತ್ಮಕ, ಐಪಿ ಮತ್ತಿತರ ಅನುಸರಣೆಗಳನ್ನು ಪಾಲಿಸುವ ಸಲುವಾಗಿ.

4
12/04/2022

**ಅರ್ಹತೆಯ ಮಾನದಂಡಗಳು:-**

1. ಕರ್ನಾಟಕದಲ್ಲಿ ನೋಂದಣಿಗೊಂಡ ಅಥವಾ ನಿಗಮಿತಗೊಂಡ ಸಂಸ್ಥೆಯಾಗಿರಬೇಕು (ಪ್ರೈವೇಟ್ ಲಿಮಿಟೆಡ್/OPC/LLP/ಪಾಲುದಾರಿಕೆ ಸಂಸ್ಥೆ). ಖಾಸಗಿ ನಿಯಮಿತ ಕಂಪನಿ (ಕಂಪನಿ ಕಾಯ್ದೆ, 2013ರಲ್ಲಿ ವ್ಯಾಖ್ಯಾನಿಸಿರುವಂತೆ) ಅಥವಾ ಪಾಲುದಾರಿಕೆ ಸಂಸ್ಥೆಯಾಗಿ ನೋಂದಾಯಿಸಿರುವಂಥದ್ದು (ಪಾಲುದಾರಿಕೆ ಕಾಯ್ದೆ, 1932ರ ಕಲಂ 59ರಡಿ ನೋಂದಣಿಯಾದುದು) ಅಥವಾ ನಿಯಮಿತ ಬಾಧ್ಯತಾ ಪಾಲುದಾರಿಕೆ (ನಿಯಮಿತ ಬಾಧ್ಯತೆಯ ಪಾಲುದಾರಿಕೆ ಕಾಯ್ದೆ, 2008 ರಡಿಯಲ್ಲಿ)

2. ಐಡಿಯಾ2ಪಿಓಸಿ ಸಹಾಯಾನುದಾನ ಮೂಲಧನ ಕಾರ್ಯಕ್ರಮ 'ಎಲಿವೇಟ್' ರಡಿಯಲ್ಲಿ ವಿಜೇತರು ಅಥವಾ ರನ್ನರ್ ಅಪ್ ಆಗಿರಬೇಕು.

3. ಸಕ್ಷಮ ಪ್ರಾಧಿಕಾರದಿಂದ ಪ್ರಮಾಣಿತ ಫಲಿತಾಂಶಗಳು ಮತ್ತು ಮಾಹಿತಿಯೊಂದಿಗೆ ಕನಿಷ್ಠ ಕಾರ್ಯಸಾಧ್ಯತೆಯಿರುವ ಉತ್ಪನ್ನ (MVP) ಇರಬೇಕು.

4. ಕಳೆದ ಮೂರು ವರ್ಷಗಳಲ್ಲಿ ಶೇಕಡ 20ಕ್ಕಿಂತ ಹೆಚ್ಚಿನ ವಾರ್ಷಿಕ ದರದಲ್ಲಿ ಬೆಳೆದಿರಬೇಕು – ಉದ್ಯೋಗಿಗಳ ಸಂಖ್ಯೆಯಲ್ಲಿ ಅಥವಾ ವಹಿವಾಟಿನಲ್ಲಿ (ಬಿಲ್ಲಿಂಗ್).

5, ಕನಿಷ್ಠ ಒಬ್ಬರು ನಿರ್ದೇಶಕ(ರು)/ಪಾಲುದಾರ(ರು) ಕಂಪನಿ/ಕಛೇರಿಯಲ್ಲಿನ ಗಣನೀಯ ಪ್ರಮಾಣದ ಷೇರುಗಳನ್ನು ಹೊಂದಿರುವ ಮಹಿಳಾ ಉದ್ಯಮಶೀಲರಾಗಿರಬೇಕು.

**ಹೊಸ ಯೋಜನೆಯ ಅನುಷ್ಠಾನದ ವಿಧಾನಗಳು:-**

1. ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್) ರವರು ಎಲಿವೇಟ್ ಯೋಜನೆಯಡಿ ಗುರುತಿಸಲ್ಪಟ್ಟ ಐಟಿ/ಐಟಿಇಎಸ್, ಇಎಸ್‌ಡಿಎಂ, ಎವಿಜಿಸಿ, ಫಿನ್‌ಟೆಕ್, ಎಡ್‌ಟೆಕ್, ಮೆಡ್‌ಟೆಕ್ ಮುಂತಾದ ವಲಯಗಳೆಲ್ಲೆಡೆಯಿಂದ ಎಲಿವೇಟ್‌ನ ಮಹಿಳಾ ಪ್ರೋತ್ಸಾಹಿತ ನವೋದ್ಯಮಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.

2. ಕಿಟ್ಸ್‌ನ ಸ್ಟಾರ್ಟ್‌ಅಪ್ ಕೋಶದಿಂದ ಕರ್ನಾಟಕ ಸ್ಟಾರ್ಟ್‌ಅಪ್ ನೀತಿ 2015-20ರ ಪ್ರಕಾರ ಅರ್ಹತೆಗಾಗಿ ಹಾಗೂ ದತ್ತಾಂಶ ಪೂರ್ಣತೆಗಾಗಿ, ತಪಾಸಣೆಗಾಗಿ ತಜ್ಞರ/ಪರಿಣಿತರ ಸಮಿತಿಯ ಮೂಲಕ ಅರ್ಜಿಗಳ ಪರಿಶೀಲನೆ ನಡೆಸುವುದು.

**2(a) ಮೌಲ್ಯಮಾಪನಕ್ಕಾಗಿ ಪರಿಗಣಿಸಬೇಕಾದ ಅಂಶಗಳು :-**

a. ಪರಿಕಲ್ಪನೆ / ತಂತ್ರಜ್ಞಾನ
b. ತಂತ್ರಜ್ಞಾನದ ಪುರಾವೆ / ಸಿದ್ಧಾಂತದ ಪುರಾವೆಯನ್ನು ಪ್ರದರ್ಶಿಸುವ ಸಾಮರ್ಥ್ಯ
c. ವ್ಯವಹಾರದ ಸಾಮರ್ಥ್ಯ
d. ತಂಡದ ಬಲ
e. ಸ್ಮರಣೀಯವಾದ ಅಂಶಗಳು
f. ಕ್ರೋಢೀಕರಿಸಿದ ಹಣಕಾಸುಗಳು
g. ಖರೀದಿಗೆ ದಕ್ಕುವ ಪೂರ್ವದಲ್ಲಿನ ಕಾರ್ಯಾದೇಶಗಳು
h. ಲಿಖಿತ / ಪ್ರಾತ್ಯಕ್ಷಿಕೆಯಾಗಿ ಮೂಲ ಮಾದರಿಗಳು
i. ಮಾರುಕಟ್ಟೆಯಲ್ಲಿ ಉತ್ಪನ್ನಗಳ ಸ್ಪರ್ಧಾತ್ಮಕತೆ
j. ಮಾರುಕಟ್ಟೆಯಲ್ಲಿ ಲಭ್ಯವಾಗುವ ಉತ್ಪನ್ನಗಳು / ಪ್ರಕ್ರಿಯೆಗಳು

3. ಪರಿಣಿತರ ಸಮಿತಿಯ ಮೂಲಕ ಪರಿಶೀಲನೆ ಮಾಡಿದ ಅರ್ಹ ಅರ್ಜಿಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕಿಟ್ಸ್ ರವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯ ಮೂಲಕ ಆಯ್ಕೆಯ ಪ್ರಕ್ರಿಯೆಯನ್ನು ನಡೆಸುವುದು.

4. ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್) ರವರು ತಜ್ಞರ ಸಮಿತಿಯಲ್ಲಿ ಆಯ್ಕೆ ಮಾಡಿದ ಅರ್ಹ ಮಹಿಳಾ ಉದ್ದಿಮೆದಾರರ ಪಟ್ಟಿಯನ್ನು ಶಿಫಾರಸ್ಸಿನೊಂದಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸುವುದು.

5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ರವರ ಅಧ್ಯಕ್ಷತೆಯ ಯೋಜನಾ ಅನುಷ್ಠಾನ ಸಮಿತಿಯಲ್ಲಿ ಆಯ್ಕೆಯಾದ ಮಹಿಳಾ ಉದ್ದಿಮೆದಾರರನ್ನು ಗುರುತಿಸಿ, ಅನುದಾನವನ್ನು ಆರ್‌ಟಿಜಿಎಸ್ ಮೂಲಕ ನೇರವಾಗಿ ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡುವುದು.

6. ಸಾಲ ಬಿಡುಗಡೆಯಾದ 06 ತಿಂಗಳ ನಂತರ, ಸಾಲದ ಮೊತ್ತದ ಅನುಸಾರ ವಾರ್ಷಿಕ ಶೇ.4 ರ ಬಡ್ಡಿ ದರವನ್ನು ಒಳಗೊಂಡಂತೆ 60 ಸಮಾನ ಕಂತುಗಳಲ್ಲಿ ಸಾಲ ಮರುಪಾವತಿಸಲು ಕ್ರಮಕೈಗೊಳ್ಳುವುದು.

7. ಜಿಲ್ಲಾ ವ್ಯವಸ್ಥಾಪಕರು/ಮಹಿಳಾ ಅಭಿವೃದ್ಧಿ ನಿರೀಕ್ಷಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರು ಕಾಲ-ಕಾಲಕ್ಕೆ ಮಹಿಳಾ ಉದ್ದಿಮೆದಾರ ಫಲಾನುಭವಿಗಳಿಂದ ಸಾಲ ಮರುಪಾವತಿ ಮಾಡಿಸಲು ಕ್ರಮವಹಿಸುವುದು.

8. ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್) ರವರು ಕಾಲ-ಕಾಲಕ್ಕೆ ಗುರುತಿಸಿದ ಸ್ಟಾರ್ಟ್‌ಅಪ್‌ಗಳಿಗೆ ಮಾತ್ರ ಈ ಯೋಜನೆಯಡಿ ಸಾಲದ ನೆರವು ನೀಡುವುದು.

9. ಈ ಯೋಜನೆಯಡಿ ಮಹಿಳಾ ಉದ್ದಿಮೆದಾರರನ್ನು ಆಯ್ಕೆ ಮಾಡುವ ಪ್ರಕ್ರಿಯೆಗೆ ಹಂಚಿಕೆಯಾದ ಒಟ್ಟು ಅನುದಾನದ ಶೇ.5 ರಷ್ಟು ಅನುದಾನವನ್ನು ಕಿಟ್ಸ್‌ಗೆ ಆಡಳಿತ ವೆಚ್ಚ ಭರಿಸಲು ಮೀಸಲಿರಿಸುವುದು.

**<u>ಮಹಿಳಾ ಉದ್ದಿಮೆದಾರರ ಆಯ್ಕೆಗಾಗಿ ಕೆಳಕಂಡ ಸಮಿತಿಗಳನ್ನು ರಚಿಸುವುದು:</u>**

**1. ಅರ್ಜಿ ಪರಿಶೀಲನಾ ಸಮಿತಿ:-** 03 Independent Jury Members
**2. ಕಾರ್ಯಕಾರಿ ಸಮಿತಿ:-**
(1) ವ್ಯವಸ್ಥಾಪಕ ನಿರ್ದೇಶಕರು, ಕಿಟ್ಸ್ - ಅಧ್ಯಕ್ಷರು
(2) ಪ್ರಧಾನ ವ್ಯವಸ್ಥಾಪಕರು (ಐಟಿ), ಕಿಟ್ಸ್ - ಸದಸ್ಯರು
(3) NASSCOM, IESA, ABLE, STPI, ISBA, C- CAMP ಮತ್ತು BBC ಗಳಿಂದ ಪ್ರತಿನಿಧಿಗಳು - ಸದಸ್ಯರು.
(4) ಪ್ರಧಾನ ವ್ಯವಸ್ಥಾಪಕರು (2) – KSWDC - ಸದಸ್ಯ ಕಾರ್ಯದರ್ಶಿ

**3. ಯೋಜನಾ ಅನುಷ್ಠಾನ ಸಮಿತಿ:-**
(1) ವ್ಯವಸ್ಥಾಪಕ ನಿರ್ದೇಶಕರು, KSWDC - ಅಧ್ಯಕ್ಷರು
(2) ಪ್ರಧಾನ ವ್ಯವಸ್ಥಾಪಕರು (1) & (2) , KSWDC - ಸದಸ್ಯರು
(3) ಲೆಕ್ಕಾಧಿಕಾರಿಗಳು, KSWDC - ಸದಸ್ಯರು
(4) ಅಧೀಕ್ಷಕರು (ಯೋಜನೆ) KSWDC –ಸದಸ್ಯಕಾರ್ಯದರ್ಶಿ

**<u>ಸಾಲ ಬಿಡುಗಡೆ ವಿಧಾನ:-</u>** ಈ ಹೊಸ ಯೋಜನೆಗೆ ಅನುದಾನವನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಅನುದಾನದಿಂದ ಅನುಷ್ಠಾನಗೊಳಿಸಲು ಕ್ರಮವಹಿಸುವುದು.

*******

12/04/2021